# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂ. 32/2017

ಸಿಡಬ್ಲ್ಯೂ-1 ಪಿಡಬ್ಲ್ಯೂ-1

ಹೆಸರುಃ ಶರಣಬಸು

ತಂದೆಯ ಹೆಸರುಃ ಅಮರಪ್ಪ ಇಟಗಿ

ವಯಸ್ಸುಃ 41 ವರ್ಷ

ಉದ್ಯೋಗಃ ಗ್ರಾಮ ಪಂಚಾಯತಿ ಸದಸ್ಯ

ವಾಸ ಸ್ಥಳಃ ಹಂಚಿಲಿ, ತಾಃ ಸಿಂದಗಿ, ಜಿಃ ವಿಜಯಪುರ

ದಿನಾಂಕ 29-11-2021

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನನ್ನ ಹೆಂಡತಿಯ ತಮ್ಮನ ಹೆಸರು ಯಲ್ಲಪ್ಪ ತಂದೆ ಸುರೇಶ ಶಿರ ಅಂತಾ ಇರುತ್ತದೆ. ಆತ ಈಗ 5-6 ವರ್ಷಗಳ ಹಿಂದೆ ಹಿಟಾಚಿ ಯಂತ್ರದ ವಾಹನದ ಮೇಲೆ ಕ್ಲೀನರ್ ಅಂತಾ ಕೆಲಸ ಮಾಡುತ್ತಿದ್ದನು. ದಿಃ 28.11.2016 ರಂದು ರಾತ್ರಿ 10.00 ಗಂಟೆಗೆ ಹಿಟಾಚಿ ವಾಹನದ ಚಾಲಕನಾದ ಚಾಸಾ-4 ಇವರು ನನಗೆ ಪೋನ ಮೂಲಕ ರಾತ್ರಿ 08.30 ಗಂಟೆಗೆ ಸದರಿ ಯಲ್ಲಪ್ಪನಿಗೆ ಅಪಘಾತವಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಅಪಘಾತದಿಂದ ಯಲ್ಲಪ್ಪನಿಗೆ ಗಾಯಗಳಾಗಿ ತಲೆಯಿಂದ ರಕ್ತ ಬಂದು ಸ್ಥಳದಲ್ಲಿಯೇ ತೀರಿಕೊಂಡಿರುತ್ತಾನೆ ಅಂತಾ ತಿಳಿಸಿದನು. ಅದೇ ರೀತಿ ಚಾಸಾ-4 ಹಿಟಾಚಿ ವಾಹನ ನಡೆಸುತ್ತಿದ್ದರು ಎಂದು ಸಹ ಹೇಳಿರುತ್ತಾರೆ. ಹಿಟಾಚಿ ವಾಹನಕ್ಕೆ ಲೈಟಿನ ಬೆಳಕು ಇರಲಿಲ್ಲ ಅದಕ್ಕೆ ಯಲ್ಲಪ್ಪ ದ್ವಿಚಕ್ರ ವಾಹನದ ಮೂಲಕ ಬೆಳಕು ತೋರಿಸುತ್ತಾ ಹೊರಟ್ಟಿದ್ದು ಟಿಪ್ಪರ ವಾಹನ ಎದುರಿನಿಂದ ಬಂದು ಹಾಯಿಸಿ ಅಪಘಾತಪಡಿಸಿರುತ್ತದೆ. ಆಗ ನಾನು, ಚಾಸಾ-5, 7 ಕೂಡಿಕೊಂಡು ಅಪಘಾತವಾದ ಸ್ಥಳಕ್ಕೆ ಹೋಗಿರುತ್ತೇವೆ. ನಾವು ಹೋದಾಗ ಯಲ್ಲಪ್ಪ ತೀರಿಕೊಂಡಿದ್ದು ಇತ್ತು. ಅಪಘಾತವು ಟಿಪ್ಪರ ವಾಹನದ ಚಾಲಕನ ತಪ್ಪಿನಿಂದ ಆಗಿರುತ್ತದೆ. ಟಿಪ್ಪರ ವಾಹನದ ಚಾಲಕ ವಾಹನವನ್ನು ಅಲ್ಲಿಯೇ ಬಿಟ್ಟು ಓಡಿ ಹೋಗಿದ್ದು ಇತ್ತು. ನಂತರ ಪೊಲೀಸರು ಆರೋಪಿತನನ್ನು ತೋರಿಸಿ ಗುರುತಿಸುವಂತೆ ಹೇಳಿರುತ್ತಾರೆ. ಈ ಕುರಿತು ನಾನು ಪೊಲೀಸರಿಗೆ ದೂರು ನೀಡಿರುತ್ತೇನೆ. ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಟಿಪ್ಪರ ವಾಹನ ವೇಗವಾಗಿ ಬಂದು ಯಲ್ಲಪ್ಪನ ದ್ವಿಚಕ್ರ ವಾಹನಕ್ಕೆ ಡಿಕ್ಕಿಪಡಿಸಿರುತ್ತದೆ.

**ಪಾಟೀ ಸವಾಲುಃ ಶ್ರೀ ಹೆಚ್. ಎಲ್. ಎ. ಆರೋಪಿ ಪರ ವಕೀಲರಿಂದ**

ನನಗೆ ವಿಷಯ ಗೊತ್ತಾದಾಗ ನಾನು ಸಿಂದಗಿಯಲ್ಲಿ ಇದ್ದೆ. ಸಿಂದಗಿಯಿಂದ ಘಟನಾ ಸ್ಥಳ ಸುಮಾರು 80 ಕಿ.ಮೀ.ನಷ್ಟು ಇರುತ್ತದೆ. ನಾನು ಘಟನಾ ಸ್ಥಳಕ್ಕೆ ಬಂದಾಗ ಸಮಯ 12.00 ಗಂಟೆ ಮೇಲೆ ಆಗಿತ್ತು. ಆಗ ನಾನು ಬಂದಾಗ ರಾತ್ರಿ ಆಗಿತ್ತು. ನಾನು ಘಟನಾ ಸ್ಥಳಕ್ಕೆ ಬಂದಾಗ ಸ್ಥಳದಲ್ಲಿ ದ್ವಿಚಕ್ರ ವಾಹನ ಹಿಟಾಚಿ ವಾಹನ, ಟಿಪ್ಪರ ವಾಹನ ಇದ್ದವು. ಆ ಎಲ್ಲ ವಾಹನಗಳ ನಂಬರ ನೋಡಿದ್ದಿರಾ ಎಂದರೆ ಸಾಕ್ಷಿ ಬೈಕ ಹಾಗೂ ಟಿಪ್ಪರ ವಾಹನದ ನಂಬರ ನೋಡಿರುವುದಾಗಿ ನುಡಿಯುತ್ತಾರೆ. ದ್ವಿಚಕ್ರ ವಾಹನದ

ಸಂ. KA-33 J-2040 ಅಂತಾ ಇರುತ್ತದೆ. ಟಿಪ್ಪರ ವಾಹನ ನಂ.KA-32-C-5371 ಇರುತ್ತದೆ. ಹಿಟಾಚಿ ವಾಹನಕ್ಕೆ ಬೆಳಕು ಇತ್ತು ಎಂದರೆ ಸರಿಯಲ್ಲ. ಹಿಟಾಚಿ ವಾಹನದ ಸಂಖ್ಯೆ ಗೊತ್ತಿದ್ದರು ಆ ವಾಹನವನ್ನು ಮತ್ತು ಅದರ ಚಾಲಕನನ್ನು ಉಳಿಸುವುದರ ಸಲುವಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-4 ಇವರು ಅಪಘಾತವನ್ನು ತಾನು ಕಣ್ಣಾರೆ ಕಂಡಿರುವುದಾಗಿ ಹೇಳಿರುತ್ತಾರೆ. ಹಿಟಾಚಿ ವಾಹನದ ಚಾಲಕ ಚಾಸಾ-4 ಇತ ಅಪಘಾತ ಮಾಡಿ ತಾನು ತಪ್ಪಿಸಿಕೊಳ್ಳುವುದರ ಸಲುವಾಗಿ ಅಪಘಾತವನ್ನು ಟಿಪ್ಪರ ವಾಹನದ ಮೇಲೆ ಹಾಕಿರುತ್ತಾನೆ ಎಂದರೆ ಸರಿಯಲ್ಲ. ಚಾಸಾ-5 ಯಾದಗಿರಿಯಲ್ಲಿ ವಾಸ ಹೊಂದಿರುತ್ತಾರೆ. ಸದರಿ ಚಾಸಾ-5 ಇವರು ನನಗಿಂತ ಮೊದಲೇ ಘಟನಾ ಸ್ಥಳಕ್ಕೆ ಬಂದಿದ್ದರು. ಚಾಸಾ-4 ಮತ್ತು 5 ಇವರು ಒಟ್ಟಾಗಿ ಟಿಪ್ಪರ ವಾಹನ ಬೈಕಗೆ ಅಪಘಾತಪಡಿಸಿರುತ್ತಾರೆ ಎಂದು ಸುಳ್ಳು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಹಿಟಾಚಿ ವಾಹನವನ್ನು ಅಪಘಾತದಿಂದ ದೂರವಿಡಲು ಹಾಗೂ ಅದರ ಚಾಲಕನನ್ನು ಅಪಘಾತದ ತಪ್ಪಿನಿಂದ ದೂರವಿಡಲು ಚಾಸಾ-4 ಮತ್ತು 5 ಇವರು ತಪ್ಪನ್ನು ಆರೋಪಿತನ ಮೇಲೆ ಹೊರೆಸಿರುತ್ತಾರೆ ಎಂದರೆ ಸರಿಯಲ್ಲ. ಹಿಟಾಚಿ ಹಾಗೂ ಟಿಪ್ಪರ ವಾಹನ ಒಂದೇ ಕಂಪನಿಯಲ್ಲಿ ಕೆಲಸ ಮಾಡುತ್ತಿವೆಯಾ ಎಂದರೆ ನನಗೆ ಗೊತ್ತಿಲ್ಲ. ಕಚ್ಚಾ ದಾರಿಯಲ್ಲಿ ದ್ವಿಚಕ್ರ ವಾಹನ ಸ್ಪೀಡಾಗಿ ಓಡುವುದಿಲ್ಲ ಎಂದರೆ ಸರಿ. ಹಿಟಾಚಿ ವಾಹನ ಸಹ ಅಷ್ಟೊಂದು ಸ್ಪೀಡಾಗಿ ಹೋಗುವುದಿಲ್ಲ ಎಂದರೆ ಸರಿ. ಅದೇ ರೀತಿ ಟಿಪ್ಪರ ವಾಹನ ಸಹ ಸ್ಪೀಡಾಗಿ ಹೋಗಲು ಆಗುವುದಿಲ್ಲ ಎಂದರೆ ಸರಿಯಲ್ಲ. ನಾವು ಘಟನಾ ಸ್ಥಳಕ್ಕೆ ವಾಹನದ ಮೂಲಕ ಹೋಗಿದ್ದು ಎಷ್ಟು ಸ್ಪೀಡನಿಂದ ಹೋಗಿರುತ್ತೇವೆ ಎಂದು ನಾನು ನೋಡಿರುವುದಿಲ್ಲ. ಸಿಂದಗಿಯಿಂದ ಸರಿಯಾದ ರಸ್ತೆಯಲ್ಲಿ ಘಟನಾ ಸ್ಥಳಕ್ಕೆ 2 ಗಂಟೆಯಲ್ಲಿ ಹೋಗಬಹುದು. ನಾನು ಮೂರು ವಾಹನಗಳು ಚಲಿಸುತ್ತಿದ್ದ ರಸ್ತೆಯಲ್ಲಿಯೇ ಬಂದಿರುತ್ತೇನೆ. ನಾನು ನನ್ನ ಅಳಿಯ ಯಲ್ಲಪ್ಪ ಇವರು ತೀರಿಕೊಂಡಿದ್ದರಿಂದ ಮತ್ತು ಆತ ಹಿಟಾಚಿ ವಾಹದಲ್ಲಿ ಕ್ಲೀನರ ಅಂತಾ ಕೆಲಸ ಮಾಡುತ್ತಿದ್ದರಿಂದ ಹಿಟಾಚಿ ವಾಹನದ ಚಾಲಕನ ವಿರುದ್ಧ ಸಾಕ್ಷಿ ಹೇಳದೇ ಆರೋಪಿತನ ವಿರುದ್ಧ ಹೇಳುತ್ತಿದ್ದ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಳಿಯ ಅಪಘಾತ ಪರಿಹಾರ ವಿಮೆ ಪಡೆಯುವ ಸಲುವಾಗಿ ಆರೋಪಿತನ ವಿರುದ್ಧ ಖೊಟ್ಟಿ ಪ್ರಕರಣ ದಾಖಲಿಸಿ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ.ದ.ನ್ಯಾದಂ.ಸೇಡಂ.